ಶ್ರೀ ಕಡಿದಾಳ್ ಮಂಜಪ್ಪ.—ಇದರಿಂದ ಹೆಚ್ಚು ಪ್ರಯೋಜನವಿಲ್ಲವೆಂದು ನಮ್ಮ ಇಲಾಖೆಯ ಅಧಿಕಾರಿಗಳು ವರದಿಮಾಡಿದ್ದಾರೆ.

ಶ್ರೀ ಮುದ್ದುರಾಮಯ್ಯ.—ಮತ್ತೊಂದು ಸಾರಿ ಪರಿಶೀಲನೆಮಾಡಿ ಈ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಪರಿಶೀಲನೆ ಮಾಡುವಂತೆ ಹೇಳುತ್ತೇನೆ.

Brahmasandra Tank.

Q.—322. Sri MUDDURAMIAH (Koratagere-Madhugiri).—

Will the Government be pleased to state :—

(*a*) the number of years passed since the estimate of Brahmasandra Tank in Sira Taluk was prepared ;

(*b*) the steps taken to construct the said tank ?

A.—Sri KADIDAL MANJAPPA (Minister for Revenue and Public Works).—

(*a*) There is no proposal for the construction of new tank but an estimate for opening out a feeder channel to Brahmasandra Ooramundinakere was prepared during the year 1952 for Rs. 5,800.

(*b*) Does not arise.

ಶ್ರೀ ಮುದ್ದುರಾಮಯ್ಯ.—ಈ ಕಾಮಗಾರಿಯ ಅಂದಾಜು ಮೊಬಲಗು ಬಹಳ ಕಮ್ಮಿ ಇರುವುದರಿಂದ, ಇದನ್ನು ಬೇಗ ಮಾಡಿಸಿ ಕೊಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಪರಿಶೀಲನೆ ಮಾಡುತ್ತೇವೆ.

Places in Mysore Taluk visited by the Present Ministers.

1 P.M.

Q.—330. Sri SHIVANANJE GOWDA (Mysore Taluk).—

Will the Government be pleased to state :—

(*a*) the names of places in Mysore Taluk visited by the present Ministers and the number of times they have visited them ;

(*b*) if they have not paid any visit, the reasons for not doing so ?

A.—Sri KADIDAL MANJAPPA (Minister for Revenue and Public Works).—

(*a*) Names of villages in Mysore Taluk visited by the Ministers.—

Date of visit and Names af villages visited	
14th Nov. 1952	
Harohalli (Jayapur Hobli).	The Minister for Local Self-Govt. (for opening the Adikarnataka School).
18th Nov. 1952	
Kumbarakoppal, Manchegowdanakoppal (Hamlets of Hebbal Kasaba Hobli).	The Minister for Revenue & Public Works (Inspection of villages).
19th Nov. 1952	
Marase Village (Varuna Hobli).	The Minister for Revenue & Public Works (Inspection of the Road to Makanahundi)..

(*b*) Does not arise.

ಶ್ರೀ ಶಿವನಂಜೇ ಗೌಡ.—ಸ್ಥಳೀಯ ಪ್ರಜಾಧಿಕಾರ ಶಾಖೆಯ ಸಚಿವರು ಜಯಪುರ ಹೋಬಳಿ ಹಾರೋಹಳ್ಳಿಯಲ್ಲಿ ಒಂದು ಆದಿಕರ್ಣಾಟಕರ ಪಾಠಶಾಲೆಯ ಪ್ರಾರಂಭೋತ್ಸವವನ್ನು ನೆರವೇರಿಸಲು ಹೋಗಿದ್ದ ಪಾಠ ಶಾಲೆಯನ್ನು ತೆರೆಯಲಾಗಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸ್ಥಳೀಯ ಪ್ರಜಾಧಿಕಾರ ಶಾಖೆಯ ಸಚಿವರು ಆ ಪಾಠಶಾಲೆಯ ಪ್ರಾರಂಭೋತ್ಸವಕ್ಕೆ ಹೋಗಿದ್ದರು. ರೆವೆನ್ಯೂ ಮಂತ್ರಿಗಳು ಗ್ರಾಮಗಳ ಪರಿಶೀಲನೆಗಾಗಿ ಕುಂಬಾರ ಕೊಪ್ಪಲು ಮತ್ತು ಮಂಚೇಗೌಡನಕೊಪ್ಪಲು ಈ ಗ್ರಾಮಗಳಿಗೂ ಮತ್ತು ಮರಸೆ ಗ್ರಾಮಕ್ಕೆ ಮಾಕನಹುಂಡಿಗೆ ಹೋಗತಕ್ಕ ರಸ್ತೆಯನ್ನು ಪರಿಶೀಲನೆ ಮಾಡಲು ಹೋಗಿದ್ದರು.

ಶ್ರೀ ಶಿವನಂಜೇ ಗೌಡ.—ಆಗ ತಮಗೆ ಆ ನುತ್ತ ಮುತ್ತಿನ ಜನರು ಅವರ ಅನಿವಾರ್ಯಗಳ ಬಗ್ಗೆ ನಲ್ಲಿನಲಾಗಿದ್ದ ಮನವಿಗಳ ಮತ್ತು ಕೇಳಿಕೆಗಳ ಬಗ್ಗೆ ತಮಗೆ ಇಲಾಖೆಯವರಿಂದ ವರದಿಗಳು ಬಂದಿವೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಅವರಿಂದ ವರದಿಗಳನ್ನೂ ಬಂದಿಲ್ಲ.

ಶ್ರೀ ಶಿವನಂಜೇ ಗೌಡ.—ಅಲ್ಲಿಯ ಜನರು ತಾವು ಅಲ್ಲಿಗೆ ಸ್ಥಳ ಅಜಮಾಯಿಷಿ ಬಗ್ಗೆ ದಯಮಾಡಿಸಿದ್ದಾಗ್ಗೆ ಆ ಕೆಲಸಗಳನ್ನು ಬೇಗ ಮಾಡಿಸಿಕೊಡಬೇಕೆಂದು ಅರಿಕೆ ಮಾಡಿಕೊಂಡಿರಲಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಆ ಕೆಲಸಗಳೆಲ್ಲಾ ರೂರಲ್ ಡೆವಲಪ್‌ಮೆಂಟ್ ಬಾಬಿನಿಂದ ಆಗಬೇಕಾಗಿವೆ.

(ಶ್ರೀ ಕಡಿದಾಳ್ ಮಂಜಪ್ಪ.)

ಆ ಕೆಲಸಗಳನ್ನು ಬೇಗ ಪ್ರಾರಂಭಿಸುವಂತೆ ಮಾಡಲು ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಡಲಾಗಿದೆ.

ಶ್ರೀ ಶಿವನಂಜೇ ಗೌಡ.—ಹಾಗಾದರೆ ಅವರು ಕೆಲಸವನ್ನು ಇನ್ನೂ ಪ್ರಾರಂಭಿಸದಿರಲು ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಶಿವನಂಜೇ ಗೌಡ.—ತಾವು ನನ್ನ (ಬ) ಪ್ರಶ್ನೆಗೆ ಉತ್ತರದಲ್ಲಿ ಇದು ಉದ್ಭವಿಸುವುದಿಲ್ಲವೆಂದು ಹೇಳಿದ್ದೀರಿ. ಹಾಗೆ ಹೇಳಲು ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ತಾವು ಕೇಳಿತಕ್ಕ ಪ್ರಶ್ನೆಯಲ್ಲಿ ಭೇಟಿಕೊಡದಿರಲು ಕಾರಣವೇನೆಂದು ಕೇಳಿದ್ದೀರಿ. ಆ ಪ್ರಶ್ನೆ ಇದರಿಂದ ಉದ್ಭವಿಸುವುದಿಲ್ಲ. ಅದಕ್ಕೆ ಹಾಗೆ ಉತ್ತರ ಕೊಡಲಾಗಿದೆ.

ಶ್ರೀ ಶಿವನಂಜೇ ಗೌಡ.—ಮೈಸೂರು ಜಿಲ್ಲೆಯು ಅಭಿವೃದ್ಧಿಯಲ್ಲಿ ಬಹಳ ಹಿಂದುಳಿದಿರುವ ಕಾರಣ ತಾವು ಅಲ್ಲಿನ ಗ್ರಾಮಗಳಿಗೆ ಹೆಚ್ಚಿಗೆ ಭೇಟಿಕೊಟ್ಟು ನೋಡಿ ಅವುಗಳ ಸ್ಥಿತಿಯನ್ನು ಉತ್ತಮಪಡಿಸಬೇಕೆಂದು ಅವರು ಆಗ್ಗೆ ತಮ್ಮಲ್ಲಿ ಕೇಳಿಕೊಳ್ಳಲಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಪ್ರತಿಯೊಂದು ಗ್ರಾಮಕ್ಕೂ ಭೇಟಿಕೊಟ್ಟು ನೋಡಿ ಅವುಗಳ ಸ್ಥಿತಿಯನ್ನು ಉತ್ತಮ ಪಡಿಸಬೇಕೆಂದರೆ ಬಹಳ ಕಷ್ಟವಾಗುತ್ತದೆ. ಅಂಥ ಆವಶ್ಯಕತೆಯಿದೆಯೆಂದು ಕಂಡು ಬರುವಂಥ ಗ್ರಾಮಗಳಿಗೆ ಮಾತ್ರ ಹೋಗಿಬರಬಹುದು.

ಶ್ರೀ ಶಿವನಂಜೇ ಗೌಡ.—ಆಗ್ಗೆ ಅಲ್ಲಿನ ಇತರ ಕೆಲವು ಗ್ರಾಮಗಳವರು ಕೇಳಿಕೊಂಡಾಗ ತಾವು ಆ ಗ್ರಾಮಗಳಿಗೆ ಅಜಮಾಯಿಷಿಗಾಗಿ ಭೆಟ್ಟಿಕೊಡುತ್ತೇವೆಂದು ಹೇಳಿದ್ದಿರಲ್ಲಾ ?

ಶ್ರೀ ಕಡಿದಾಳ್ ಮಂಜಪ್ಪ.—ಪ್ರತಿಯೊಂದು ಕಡೆಯಲ್ಲೂ ಅವರ ಸ್ಥಳಕ್ಕೆ ಬರಬೇಕೆಂದು ಜನರು ಕೋರುತ್ತಾರೆ. ಆದರೆ ಅಂಥ ಆವಶ್ಯಕತೆ ಎಲ್ಲೆಲ್ಲದೆಯೆಂದು ಕಂಡುಬರುತ್ತದೋ ಅಂಥ ಸ್ಥಳಗಳಿಗೆ ಮಾತ್ರ ಭೇಟಿ ಕೊಡಲು ಸಿದ್ಧವಾಗಿದ್ದೇವೆ ವಿನಾ ಕರೆದ ಕಡೆಗಳಿಗೆಲ್ಲಾ ಹೊಗಲು ಆಗುವುದಿಲ್ಲ.

ಶ್ರೀ ಎಂ. ಪಳನಿಯಪ್ಪನ್.—ಅಲನೂರು ಕಾರ್ಖಿಟ್ಯುರೆಸಿಗೆ ಯಾವಯಾವ ಮಂತ್ರಿಗಳು ಎಷ್ಟೆಷ್ಟು ಸಾರ್ತಿ ಭೇಟಿ ಕೊಟ್ಟಿದ್ದೀರಿ ?

(ಉತ್ತರವಿಲ್ಲ)

Sri M. LINGANNA.—May I know whether the Government are aware that this particular Taluk has not got even a single road which is maintained well ?

Sri KADIDAL MANJAPPA.—I am aware that there are some good roads in that Taluk.

Sri M. LINGANNA.—May I know the roads in this Taluk which are maintained by Public Works and the District Board ?

Sri KADIDAL MANJAPPA.—Notice.

Cement-concreting of Nanjangud-Gundlupet Road.

Q.—333. Sri H. K. SHIVARUDRAPPA (Gundlupet-Heggaddevankote).—

Will the Government be pleased to state :—

(*a*) whether it is a fact that Nanjangud-Gundlupet Road is being cement-concreted ;

(*b*) the amount that has been allotted for 1953-54 for cement-concreting this road ;

(*c*) the particular miles between which this road is in such a bad condition as to make it difficult for vehicular traffic ;

(*d*) the miles between which the road has been tarred and the condition thereof ;

(*e*) the length and breadth of the road that will be concreted during this year ;

(*f*) the miles between which the road will be concreted this year ?

A.—Sri KADIDAL MANJAPPA (Minister for Revenue and Public Works).—

(*a*) Yes.

(*b*) There is no allotment specifically for this work. But a sum of Rs. 3,00,000 has been asked for.

(*c*) Miles 110 to 114.

(*d*) Miles 98 to 102. The tarred surface is fast wearing off.

(*e*) Length : 5 miles. Width of concreted surface is proposed to be 12 feet.

(*f*) Miles 98 to 102.

ಶ್ರೀ ಎಚ್. ಕೆ. ಶಿವರುದ್ರಪ್ಪ.—(ಬ) ಪ್ರಶ್ನೆಗೆ ಉತ್ತರವಾಗಿ, ಹಣವನ್ನೊದಗಿಸಿಲ್ಲ ಎಂದು ಹೇಳಿದ್ದೀರಿ. ಅಂದಮೇಲೆ ಈ ವರ್ಷ ಆ ಕೆಲಸವನ್ನು ಕೈಕೊಳ್ಳುವುದಿಲ್ಲವೆಂದು ಹೇಳುತ್ತೀರೇನು ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ, ಅದಕ್ಕೆ ರಿಅಪ್ರೋಪ್ರಿಯೇಷನ್ನಿನಿಂದಲೋ ಅಥವಾ ಸ್ಪೆಷಲ್ ಗ್ರಾಂಟಿನಿಂದರೋ ಮೊಬಲಗನ್ನು ಒದಗಿಸಬೇಕೆಂದು ಉದ್ದೇಶಿಸಲಾಗಿದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ತಾವು (ಎಫ್) ಪ್ರಶ್ನೆಗೆ ಉತ್ತರವಾಗಿ 98ನೆಯ ಮೈಲಿ ಕಲ್ಲಿನಿಂದ 102ನೆಯ ಮೈಲಿ ಕಲ್ಲಿನ ವರೆಗೆ ಕಾಂಕ್ರೀಟ್ ಹಾಕಲಾಗುತ್ತಿದೆಯೆಂದು ತಿಳಿಸಿದ್ದೀರಿ. (ಸಿ) ಪ್ರಶ್ನೆಗೆ ಉತ್ತರವಾಗಿ ವಾಹನ ಸಂಚಾರಕ್ಕೆ ಆತಂಕ ಉಂಟು ಮಾಡುವಷ್ಟರ ಮಟ್ಟಿಗೆ ರಸ್ತೆ ತೀರ ಹದಗೆಟ್ಟಿರುವುದು